# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ ಃ 96/2015

**ಪಿಡಬ್ಲ್ಯೂ ಃ 03**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 09-01-2019 ರಂದು ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ **ಶ್ರೀ ಕೆ ಎನ್ ಆರ್** ವಕೀಲರಿಂದ ಃ

ನನ್ನ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ವಾದಿಯು ಕೊಟ್ಟಿರುತ್ತಾರೆ. ನನಗೆ ಖುದ್ದು ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ. ಈ ದಾವೆಯನ್ನು ವಾದಿಯು ಸರ್ವೆ ನಂ ಃ 291 ರ ಮೇಲೆ ಹಾಕಿರುತ್ತಾರೆ. ಆ ಆಸ್ತಿಗಳು ವಾದಿಗೆ ಹೇಗೆ ಬಂದಿರುತ್ತದೆ ಅಂದರೆ ಅದನ್ನು ವಾದಿಯು ಖರೀದಿ ಮಾಡಿರುತ್ತಾರೆ. ಅದನ್ನು ವಾದಿಯು ದಿ ಃ 15-05-1980 ರಂದು ಖರೀದಿ ಮಾಡಿರುತ್ತಾರೆ. ಅವರು ಸರ್ವೆ ನಂ ಃ 291 ರಲ್ಲಿ 2 ಎಕರೆ 38 ಸೆಂಟ್ಸು ಜಮೀನನ್ನು ಖರೀದಿ ಮಾಡಿರುತ್ತಾರೆ. ಅದು ಒಂದೇ ಸರ್ವೆ ನಂಬರ ಅಥವಾ ಇನ್ನೊಂದು ಸರ್ವೆ ನಂಬರ ಇರುತ್ತದೆಯೇ ಅಂದರೆ ಎರಡು ಸರ್ವೆನಂಬರಗಳನ್ನು ಖರೀದಿ ಮಾಡಿರುತ್ತಾರೆ. ಇನ್ನೊಂದರ ಸರ್ವೆ ನಂ ಃ 290 ಆಗಿರುತ್ತದೆ. ನೀವು ಈಗಾಗಲೇ ಹೇಳಿದಂತೆ ಸರ್ವೆ ನಂ ಃ 291 ಖರೀದಿ ಮಾಡಿರುತ್ತಾರೆ ಎಂದು ಹೇಳಿರುತ್ತೀರಿ ಅದು ಸತ್ಯವಾ ಅಥವಾ ಎರಡು ಸರ್ವೆ ನಂಬರಗಳನ್ನು ಖರೀದಿ ಮಾಡಿರುವುದು ಸತ್ಯವಾ ಅಂದರೆ ಸರ್ವೆ ನಂ ಃ 291 ನ್ನು ಖರೀದಿ ಮಾಡಿರುವುದು ನಿಜ. ಸರ್ವೆ ನಂ ಃ 291 ರಲ್ಲಿ 2 ಎಕರೆ 38 ಸೆಂಟ್ಸು ಜಮೀನನ್ನು ಖರೀದಿ ಮಾಡಿರುತ್ತಾರೆ ಅಷ್ಟು ಜಮೀನನ್ನು ಅದೇ ಸರ್ವೆ ನಂಬರಲ್ಲಿ ಖರೀದಿ ಮಾಡಿರುತ್ತಾರೆಯೇ ಅಂದರೆ ಇಲ್ಲ.

02. ನನ್ನ 8 ಎಕರೆ 8 ಸೆಂಟ್ಸು ಜಮೀನು ಸರ್ವೆ ನಂ ಃ 290 ರಲ್ಲಿ ಇರುತ್ತದೆ. ಈ ಆಸ್ತಿಯು ಮಹಾಜನದಹಳ್ಳಿ ಗ್ರಾಮದಲ್ಲಿ ಇರುತ್ತದೆ. ಅದನ್ನು ನನ್ನ ಅಜ್ಜನಾದ ತಿಗರಿ ಶಿವಪ್ಪ ಅವರು 8 ಎಕರೆ 8 ಸೆಂಟ್ಸು ಜಮೀನನ್ನು ಖರೀದಿ ಮಾಕಡಿರುತ್ತಾರೆ. ನನ್ನ ಅಜ್ಜ 8 ಎಕರೆ 8 ಸೆಂಟ್ಸು ಜಮೀನನ್ನು ಖರೀದಿ ಮಾಡಿಲ್ಲವೆಂದರೆ ಸರಿಯಲ್ಲ. ಅದು 9 ಎಕರ 8 ಸೆಂಟ್ಸು ಜಮೀನು ಅಂದರೆ ಸರಿ. ಅದರಲ್ಲಿ 1 ಎಕರೆ 16 ಸೆಂಟ್ಸು ಜಮೀನನ್ನು ಪ್ರತಿವಾದಿಯ ತಂದ ಪತ್ತಾರ ತಿಂದಪ್ಪ ಖರೀದಿ ಮಾಡಿರುತ್ತಾರೆ ಅಂದರ ಸರಿ. ಹಾಗಾಗಿ ನಿಮಗೆ 7 ಎಕರೆ 92 ಸೆಂಟ್ಸು ಜಮೀನು ಉಳಿದಿರುತ್ತದೆ ಅಂದರೆ 8 ಎಕರೆ 8 ಸೆಂಟ್ಸು ಜಮೀನು

ಉಳಿದಿರುತ್ತದೆ. (ಸಾಕ್ಷಿಯು ಪುನಃ ಮುಂದುವರೆದು ಒಟ್ಟು ಆಸ್ತಿ 9 ಎಕರೆ 8 ಸೆಂಟ್ಸು ಜಮೀನು ಇತ್ತು ಅದರಲ್ಲಿ ತಿಗರಿ ಶಿವಪ್ಪ ದಿ : 10-04-1963 ರಂದು ಪತ್ತಾರ ತಿಂದಪ್ಪ ಅವರಿಗೆ 1 ಎಕರೆ 16 ಸೆಂಟ್ಸು ಜಮೀನನ್ನು ಮಾರಾಟ ಮಾಡಿರುತ್ತಾರೆ ಅದೇ ದಿವಸ ತಿಗರಿ ಶಿವಪ್ಪನವರು ಸರ್ವೆ ನಂ : 291 ರ ಪೈಕಿ 1 ಎಕರೆ 50 ಸೆಂಟ್ಸು ಜಮೀನನ್ನು ಪತ್ತಾರ ತಿಂದಪ್ಪ ಅವರಿಂದ ನನ್ನ ಅಜ್ಜನಾದ ತಿಗರಿ ಶಿವಪ್ಪ ಅವರು ಖರೀದಿ ಮಾಡಿರುತ್ತಾರೆ.) ಸರ್ವೆ ನಂ : 290 ರಲ್ಲಿ 1 ಎಕರೆ 16 ಸೆಂಟ್ಸು ಜಮೀನನ್ನು ಮಾರಾಟ ಮಾಡಿದ್ದು ನಿಮಗೆ ಉಳಿಯಬೇಕಾದದ್ದು 7 ಎಕರ 92 ಸೆಂಟ್ಸು ಜಮೀನು ಮಾತ್ರ ಅಂದರೆ ನಮ್ಮ ಜಮೀನು ಕ್ರಾಸ ಆಗಿ ಹೋಗಿದ್ದರಿಂದ ನಮಗೆ 8 ಎಕರೆ 8 ಸೆಂಟ್ಸು ಜಮೀನು ಉಳಿದುಕೊಂಡಿರುತ್ತದೆ. ನಿಮಗೆ 7 ಎಕರೆ 92 ಸೆಂಟ್ಸು ಜಮೀನು ಮಾತ್ರ ಉಳಿದುಕೊಂಡಿರುತ್ತದೆ ಅಂದರೆ 8 ಎಕರೆ 8 ಸೆಂಟ್ಸು ಜಮೀನು ಉಳಿದುಕೊಂಡಿರುತ್ತದೆ. 7 ಎಕರೆ 92 ಸೆಂಟ್ಸು ಜಮೀನು ಉಳಿಯಬೇಕಾಗಿದ್ದನ್ನು ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಅದನ್ನು 8 ಎಕರೆ 8 ಸೆಂಟ್ಸು ಎಂದು ಖಾತೆಯಲ್ಲಿ ಬದಲಾಯಿಸಿಕೊಂಡಿರುತ್ತೀರಿ ಅಂದರೆ ಸರಿಯಲ್ಲ. ಹೆಚ್ಚುವರಿಯಾಗಿ ಆಸ್ತಿಯ ಖಾತೆಯನ್ನು ಬದಲಾಯಿಸಿಕೊಂಡಿದ್ದರಿಂದಲೇ ನಿಮಗೆ ಆಸ್ತಿಯಲ್ಲಿ ಕಡಿಮೆ ಸಿಗುತ್ತದೆ ಎಂಬ ಭಯದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

03. ಪ್ರತಿವಾದಿಯ ತಂದೆ ತಿಂದಪ್ಪ ಖರೀದಿ ಮಾಡಿದ 1 ಎಕರೆ 16 ಸೆಂಟ್ಸು ಜಮೀನಿನಲ್ಲಿ ಒಂದೇ ದಿನ 50 ಸೆಂಟ್ಸುನ ಹಾಗೆ ಮಾಳಮ್ಮನ್ನವರ ಗೋಣಿಬಸಪ್ಪ, ಮುದ್ರಪ್ಪನ್ನವರ ಇವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಕೊಡಲಾಗಿರುತ್ತದೆ ಅಂದರೆ ಸರಿ. ಹಾಗಾಗಿ 1 ಎಕರೆ 16 ಸೆಂಟ್ಸುನಲ್ಲಿ ತಲಾ 50 ಸೆಂಟ್ಸು ಜಮೀನನ್ನು ಇಬ್ಬರಿಗೆ ಮಾರಾಟ ಮಾಡಿರುವುದರಿಂದ ಅಲ್ಲಿ ಬರೀ 16 ಸೆಂಟ್ಸು ಜಮೀನು ಮಾತ್ರ ಉಳಿದುಕೊಂಡಿರುತ್ತದೆ ಅಂದರೆ ನಮ್ಮ ಪೂರ್ವಿಕರಿಗೆ ಗೊತ್ತು. ನಿಮಗೆ ಇದರ ಬಗ್ಗೆ ಸಂಪೂರ್ಣವಾದ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ವಾದಿಯ ಗಂಡ ಖರೀದಿ ಮಾಡಿದ್ದು ಈ ಸರ್ವೆ ನಂಬರನ್ನು ಮಾರಾಟಕ್ಕೆ ಕೊಡಲು ಪ್ರತಿವಾದಿಯ ತಾಯಿಗೆ ಯಾವುದೇ ಹಕ್ಕು ಇರಲಿಲ್ಲವೆಂದರೆ ಸರಿಯಲ್ಲ. ನಿಮ್ಮ ಪ್ರಮಾಣಪತ್ರದಲ್ಲಿ ಹೇಳಿದಂತೆ ಸರ್ವೆ ನಂ : 291 ರಲ್ಲಿ 2 ಎಕರೆ 38 ಸೆಂಟ್ಸು ಜಮೀನನ್ನು ವಾದಿಯ ಗಂಡ ಖರೀದಿ ಮಾಡಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ಅದೇರೀತಿ ವಾದಿಯು 2 ಎಕರೆ 38 ಸೆಂಟ್ಸು ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು

ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹಕ್ಕುಬದಲಾವಣೆ ಮ್ಯುಟೇಶನ ಅನ್ನು ಸರ್ವೆ ನಂ : 290 ಸರ್ವೆ ನಂಬರಲ್ಲಿ ತಿರಸ್ಕಾರವಾಗಿದ್ದರ ಬಗ್ಗೆ ಮಾಹಿತಿ ಇರುತ್ತದೆ ಅಂದರೆ ನನಗೆ ಮಾಹಿತಿ ಇಲ್ಲ. ಅವರಿಗೆ ಅದನ್ನು ಮಾರಾಟ ಮಾಡಲು ಹಕ್ಕು ಇಲ್ಲದೇ ಇರುವುದರಿಂದ ಅದು ತಿರಸ್ಕೃತವಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿದಂತೆ ವಾದಿಗೆ ಮಾಲಿಕತ್ವ, ಹಕ್ಕು ಮತ್ತು ಸ್ವಾದೀನ ಇರುವುದಿಲ್ಲವೆಂದರೆ ಸರಿಯಲ್ಲ. ನೀವು ಖರೀದಿ ಮಾಡಿದ 8 ಎಕರೆ 8 ಸೆಂಟ್ಸು ಜಮೀನಿನ ಖರೀದಿ ಪತ್ರವನ್ನು ತೋರಿಸಿ ನೀವು ನಿಮ್ಮ ವಕೀಲರ ಮೂಲಕ ಪ್ರಮಾಣಪತ್ರವನ್ನು ಬರೆಸಿರುತ್ತೀರಿ ಅಂದರೆ ನಾನು ಖರೀದಿ ಪತ್ರವನ್ನು ತೋರಿಸಿಲ್ಲ.

04. ನಾನು ಬಿ ಎಸ್ ಸಿ ಸ್ಪೇಷಲ್ ಸಿ ಬಿ ಜಡ ಪದವೀಧರ. ನೀವು ವಿದ್ಯಾವಚಿತರಾಗಿದ್ದರಿಂದ 8 ಎಕರೆ 8 ಸೆಂಟ್ಸು ಜಮೀನು ಕಡಿಮೆ ಆಗುತ್ತದೆ ಎಂಬ ಕಾರಣದಿಂದ ಸುಳ್ಳು ಮಾಹಿತಿಯನ್ನು ಕೊಟ್ಟು ಪ್ರಮಾಣಪತ್ರವನ್ನು ಬರೆಸಿರುತ್ತೀರಿ ಅಂದರೆ ಸುಳ್ಳು. ಹೆಚ್ಚುವರಿಯಾಗಿ ನಮೂದು ಆಗಿರುವ ಆಸ್ತಿಯು ಕೈಬಿಟ್ಟು ಹೋಗುತ್ತದೆ ಎಂಬ ಕಾರಣದಿಂದ ವಾದಿಯ ಪರವಾಗಿ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

ಎಸ್ ಎಸ್ ಜೆ
ನಕಲು ಬೆರಳಚ್ಚುಗಾರರು.